ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗ ರೆಡ್ಡಿ:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಒಟ್ಟು 9 ಮಿಲ್ಕ್ ಪಾರ್ಲರ್ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಎಲ್ಲಲ್ಲಿ ಇದೆ ಅಂತ ಹೇಳಿಲ್ಲ ಮತ್ತು ಯಾವ ಆಧಾರದ ಮೇಲೆ ಈ ಉಪ ನಿಬಂಧಕರಿಗೆ ಆ ಒಂದು ಪಾರ್ಲರ್ ಕೊಟ್ಟಿದ್ದಾರೆ ಮತ್ತು ಈ ಮಿಲ್ಕ್ ಪಾರ್ಲರ್‌ಗಳು ಲಾಭದಲ್ಲಿ ನಡೆಯುತ್ತಿವೆಯೇ? 9 ಮಿಲ್ಕ್ ಪಾರ್ಲರ್‌ಗಳು ಏನು ಇವೆ, ಅವು ಸಾಲದು; ಜಯನಗರ ಬಸ್ ಸ್ಟ್ಯಾಂಡ್‌ನಲ್ಲಾಗಲಿ ನಮ್ಮ ರೈಲ್ವೆ ಸ್ಟೇಷನ್‌ನಲ್ಲಾಗಲಿ ಮತ್ತು ಸಿಟಿ ಮಾರ್ಕೆಟಿನಲ್ಲಾಗಲಿ ಈ ಮಿಲ್ಕ್ ಪಾರ್ಲರ್‌ಗಳಿಲ್ಲ. ಆದ್ದರಿಂದ ಹೆಚ್ಚು ಸಂಖ್ಯೆಯಲ್ಲಿ ಜನರು ಎಲ್ಲಿ ಓಡಾಡುತ್ತಾರೋ ಅಲ್ಲಿಇನ್ನೂ ಹೆಚ್ಚಿನ ರೀತಿಯಲ್ಲಿ ಪಾರ್ಲರ್ ತೆಗೆಯುವ ಒಂದು ಉದ್ದೇಶ ಇದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ಸದಸ್ಯರು ಒಂಬತ್ತು ಪಾರ್ಲರ್‌ಗಳು ಎಲ್ಲಿವೆ, ಆ ಸ್ಥಳಗಳ ಹೆಸರು ತಿಳಿಸಿಲ್ಲವೆಂದು ಹೇಳುತ್ತಿದ್ದಾರೆ. ಅವುಗಳು ಜನತಾ ಬಜಾರ್, ಸಿಟಿ ಮಾರ್ಕೆಟ್, ಡಿ. ಸಿ. ಆಫೀಸ್ ಕಾಂಪೌಂಡ್, ಎಂ. ಎಸ್. ಬಿಲ್ಡಿಂಗ್, ಮೆಯೋಹಾಲ್, ಪಿ. ಡಬ್ಲ್ಯೂ. ಡಿ. ಆಫೀಸ್, ಹೈ ಕೋರ್ಟ್, ಕೆ. ಎಸ್. ಆರ್. ಟಿ. ಸಿ. ಡಿಪೋ ಹಾಗೂ ರೈಲ್ವೆ ಸ್ಟೇಷನ್ ಹೀಗೆ 9 ಕಡೆ ತೆರೆಯಲಾಗಿದೆ. ಇನ್ನು ಅವರು ಕೇಳಿದ ಪ್ರಕಾರ ಇನ್ನು ಐದು ಪಾರ್ಲರ್‌ಗಳ ಅವಶ್ಯಕತೆ ನಮಗೆ ಕಾಣುತ್ತಿದೆ. ಕಾರ್ಪೊರೇಷನ್‌ನವರ ಜೊತೆಗೆ ಚರ್ಚೆ ಮಾಡುತ್ತೇವೆ. ಜಯನಗರ ಕಾಂಪ್ಲೆಕ್ಸ್, ಮಲ್ಲೇಶ್ವರಂ, ಶಿವಾಜಿನಗರ, ಶೇಷಾದ್ರಿಪುರಂ, ರಾಜಾಜಿನಗರ ಮುಂತಾದ ಕಡೆ ಹೊಸದಾಗಿ ತೆರೆಯುವ ಬಗ್ಗೆ ಕೆ. ಎಂ. ಎಫ್.ನ ವಿಚಾರದಲ್ಲಿದೆ.

ಶ್ರೀ ಎ.ಕೆ.ಅನಂತಕೃಷ್ಣ:- ಮೆಯೋ ಹಾಲ್‌ನಲ್ಲಿ ಮಿಲ್ಕ್ ಪಾರ್ಲರ್ ಎಲ್ಲಿ ಇದೆ? ಜನತಾ ಬಜಾರ್‌ನಲ್ಲಿ ಎಲ್ಲಿ ಇದೆ. ?

ಶ್ರೀ ಬಸವರಾಜ ಪಾಟೀಲ್:- ಜನತಾ ಬಜಾರ್ ಹೊರಗಡೆ ಒಂದು ಗುಪ್ತಾ ಮಾರ್ಕೆಟ್ ಅಂತ ಇದೆ ; ಮೆಯೋಹಾಲ್‌ನಲ್ಲಿ ಬೇರೆ ಇದೆ, ಅದನ್ನೆಲ್ಲಾ ಒಂದಕ್ಕೊಂದಕ್ಕೆ ಸೇರಿಸಬೇಡಿ.

ಶ್ರೀ ರಾಮಲಿಂಗರೆಡ್ಡಿ:- ಸನ್ಮಾನ್ಯ ಅಧ್ಯಕ್ಷಣಿಯವರೇ, ಅಲ್ಲಿ ಒಂದು ಪಾರ್ಲರ್‌ನಲ್ಲಿ ಏನಾಗಿದೆ, ೩೫೦ಎಂ.ಎಲ್. ಬಾಟ್ಲ್‌ನಲ್ಲಿ ಕೊಡುತ್ತಿದ್ದಾರೆ. ಇದನ್ನು ಇನ್ನು ೧೦೦ ಎಂ.ಎಲ್.ಇಲ್ಲವೇ ೧೨೫ ಎಂ.ಎಲ್ ಬಾಟಲ್ಸ್‌ನಲ್ಲಿ ಕೊಡಬೇಕು. ಮತ್ತು ಅದರ ಮೇಲೆ ಡೇಟ್ ಹಾಕಿ ಕೊಡಬೇಕು. ಈಗ 4-5 ದಿವಸವಾದರೂ ಅದನ್ನೇ ತಂದು ಕೊಡುತ್ತಿರುತ್ತಾರೆ. ಪ್ರತಿದಿನ ಬದಲಾಯಿಸಿ ಕೊಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಸವರಾಜ ಪಾಟೀಲ್:- ಸನ್ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ, ಅದನ್ನು ಪೂರೈಸಲು ನಾನು ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷಣಿಯವರು:- ಮಾನ್ಯ ಸಿದ್ದಯ್ಯನವರೇ ತಮ್ಮ ಪ್ರಶ್ನೆಯನ್ನು ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದಾರೆ, ಆದ್ದರಿಂದ ಅಲ್ಲಿಂದ ಉತ್ತರ ಬಂದಮೇಲೆ ತೆಗೆದುಕೊಳ್ಳೋಣ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಿಬ್ಬಂದಿ ಬಗ್ಗೆ.

458 (2112) ಶ್ರೀ ಎ.ಎಂ.ಹಿಂಡಸ್‌ಗೇರಿ (ಹುಬ್ಬಳ್ಳಿ)

ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಈಗ ಇರುವ ಸಿಬ್ಬಂದಿ ವರ್ಗದವರು ಮಂಡಳಿಯಲ್ಲಿ ಹೆಚ್ಚುತ್ತಿರುವ ಕಾರ್ಯಗಳನ್ನು ನಿರ್ವಹಿಸಲು ಕಷ್ಟವಾಗುತ್ತಿದೆ ಎಂಬುದು ನಿಜವೇ ?

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಹೆಚ್ಚುವರಿ ಸಿಬ್ಬಂದಿಯನ್ನು ಹಾಗೂ ಅಧಿಕಾರವನ್ನು ಕೊಡುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಬಿ.ಬಸವಲಿಂಗಪ್ಪ (ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವರು)-

ಅ) ಹೌದು

ಆ) ಇದೆ. ಹೊಸದಾಗಿ ಹುದ್ದೆ ಮತ್ತು ನೇಮಕಾತಿ ನಿಯಮಾವಳಿಯನ್ನು ತಯಾರು ಮಾಡಲಾಗುತ್ತಿದೆ. ಇದೀಗ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಾವಳಿಗಳ ಪ್ರಕಾರ ನೇಮಕಾತಿಗಳನ್ನು ಮಾಡಲಾಗುತ್ತಿದೆ.

ಶ್ರೀ ಎ. ಎಂ. ಹಿಂಡಸ್‌ಗೇರಿ:- ಸಭಾಧ್ಯಕ್ಷಿಣಿಯವರೆ, "whether it is a fact that the existing staff in the Pollution Control Board could not cope up with the increased activities of the Board?" ಎಂದು ಕೇಳಿದ್ದಕ್ಕೆ " Is there any proposal before the Government to strengthen the Board with additional staff and powers ?" ಎಂದು ಕೇಳಿದ್ದಕ್ಕೆ ಇನ್ನೂ ಕೂಡ ಮಾಡುವ ಹಂತದಲ್ಲಿ ಇದೆಯೆಂದು ತಿಳಿಸಿದ್ದಾರೆ. ಇದು ಕರ್ನಾಟಕದಲ್ಲಿ ಎಷ್ಟು ಪಲ್ಯೂಷನ್ ಬೆಳೆಯುತ್ತದೆ ಅಂಥ ತಮಗೆ ಗೊತ್ತಿದೆ. ಸ್ಟಾಫ್ ಕಡಿಮೆ ಇದೆ ಎಂದು ಹೇಳಿದ್ದಾರೆ. ಎಷ್ಟು ದಿವಸದಲ್ಲಿ ಮಾಡುತ್ತಾರೆ ಅಂಥ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ ಮಾಲಿನ್ಯ ನಿಯಂತ್ರಣ ಇಲಾಖೆ ಮೂರು ಕಾಯಿದೆಗಳ ಅಡಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯಿದೆ1974, ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯಿದೆ 1981 ಹಾಗೂ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಉಪಕರಣ ಕಾಯಿದೆ 1977, ಈ ಮೂರು ಕಾಯಿದೆಗಳ ಹಿನ್ನೆಲೆಯಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಈ ಇಲಾಖೆಗೆ ಸಾಕಷ್ಟು ಸಿಬ್ಬಂದಿ ಬೇಕೆಂಬುದನ್ನು ಸರ್ಕಾರ ಈಗಾಗಲೇ ಮನಗಂಡಿದೆ. ಈ ಬಗ್ಗೆ ಪ್ರಸ್ತಾವನೆ ಕೂಡ ಮಾಡಲಾಗಿದೆ. ಶೀಘ್ರದಲ್ಲಿ ಇದಕ್ಕೆ ಒಂದು ತೀರ್ಮಾನ ತೆಗೆದುಕೊಂಡು ಹುದ್ದೆಗಳನ್ನು ಸೃಷ್ಟಿಸಿ ನಂತರ ನೇಮಕಾತಿ ಮಾಡಿ, ಅಗತ್ಯಕ್ಕೆ ಬೇಕಾಗುವಷ್ಟು ಹುದ್ದೆಗಳನ್ನು ನಾವು ನೇಮಕಾತಿ ಮಾಡುತ್ತೇವೆ ಎನ್ನುವ ಭಾತನ್ನು ಅವರಿಗೆ ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಎ.ಎಂ.ಹಿಂಡಸ್‌ಗೇರಿ:-ಸಭಾಧ್ಯಕ್ಷಿಣಿಯವರೆ, ನನ್ನ ಮತ್ತೊಂದು ಪ್ರಶ್ನೆ ಅಂದರೆ ಈ ಪಲ್ಯೂಶನ್ ಕಂಟ್ರೋಲ್ ಬೋರ್ಡ್‌ನ ಒಂದು ವ್ಯವಸ್ಥೆ ಬೆಂಗಳೂರಿನಲ್ಲಿ ಮಾತ್ರ ಇದೆ. ಇದರಿಂದ ಸಾಕಷ್ಟು ಉತ್ತರ ಭಾಗಕ್ಕೆ ತೊಂದರೆಯಾಗುತ್ತದೆ. ಅದರ ಒಂದು ಬ್ರಾಂಚ್ ಏನಾದರೂ ರೆವಿನ್ಯೂ ಡಿವಿಜನ್ ವೈಸ್ ತೆಗೆಯಲಿಕ್ಕೆ ಸರ್ಕಾರಕ್ಕೆ ಸಾಧ್ಯವೇ ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.